ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 21 ನೇ ಸೆಪ್ಟೆಂಬರ್, 2020

E.W.S Certificate ನ್ನು ಪಡೆಯುವ ಮಾನದಂಡಗಳ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ) -

14 (149) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ರಾಜ್ಯದಲ್ಲಿ E.W.S (Economically Weaker Section Certificate) ನ್ನು ಪಡೆಯಲು ಇರುವ ಮಾನದಂಡಗಳೇನು; ಇದರ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದ ಪ್ರತಿ ನೀಡುವುದು;

(ಆ) ರಾಜ್ಯದಲ್ಲಿ ಈ ಪ್ರಮಾಣ ಪತ್ರ ಪಡೆಯಲು ಅರ್ಹರಿರುವ ಜಾತಿಗಳು ಯಾವುವು; ಇದರ ಸಂಬಂಧ ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಹಾಗೂ ಇತರೆ ಆದೇಶದ ಪ್ರತಿಗಳನ್ನು ನೀಡುವುದು;

(ಇ) ರಾಜ್ಯದಲ್ಲಿ ಈ ಪ್ರಮಾಣ ಪತ್ರ ಪಡೆಯಲು ಸರ್ಕಾರವು ನಿಗದಿಪಡಿಸಿರುವ ಉಪ ಜಾತಿಗಳನ್ನು ದೃಢೀಕರಿಸುವ ದಾಖಲೆಗಳು ಯಾವುವು;

(ಈ) ಸದರಿ ಅಭ್ಯರ್ಥಿಯ ಟಿ.ಸಿ. ಅಥವಾ ಜನನ ಪ್ರಮಾಣ ಪತ್ರದಲ್ಲಿ ಭಾರತೀಯ ಹಿಂದು ಒಕ್ಕಲಿಗ ಎಂದು ನಮೂದಾಗಿದ್ದು ಉಪ ಜಾತಿಗಳನ್ನು ನಮೂದಿಸಿರುವುದಿಲ್ಲ; ಹಾಗಾದರೆ ಉಪ ಜಾತಿಗಳನ್ನು ರುಜುವಾತು ಮಾಡಿ E.W.S (Economically Weaker Section Certificate) ನ್ನು ಪಡೆಯಲು ಯಾವ ದಾಖಲೆಗಳನ್ನು ನೀಡಬೇಕಾಗುತ್ತದೆ? ವಿವರವಾದ ಮಾಹಿತಿಗಳನ್ನು ನೀಡುವುದು;